# 28

# ನೂತನ ಕ್ರೈಸ್ತರಿಗೆ ಉಂಟಾಗುವ ಅಡ್ಡಿಗಳು

# (9:19-31; 22:17-21)

ಪೌಲನು ಕ್ರೈಸ್ತ ಜೀವಿತವನ್ನು ಒಂದು ಓಟಕ್ಕೆ ಹೋಲಿಸಿರುವನು (1 ಕೊರಿಂಥ 9:24-27; 2 ತಿಮೊಥೆ 4:7, 8) ಕೆಲವು ಕ್ರೈಸ್ತರಿಗೆ ಅವರ ಜೀವಿತವು ನೂರು ಮೀಟರ್ ಓಟದಂತಿರುತ್ತದೆ; ಅದನ್ನು ವೇಗವಾಗಿ ಓಡುವರು. ಆದರೆ ಅನೇಕರಾದ ನಮಗೆ, ಪ್ರಯಾಸಕರವಾದ ಮ್ಯಾರಥಾನ್ ಓಟದಂತಿರುತ್ತದೆ. ಪೌಲನು ಎದುರಿಸಿದ *ಓಟವು ಹರ್ಡಲ್* ಓಟದಂತಿತ್ತು. ಅವನು ದೀಕ್ಷಾಸ್ನಾನ ಹೊಂದಿಕೊಂಡ ತಕ್ಷಣ, ಅನೇಕ ಅಡ್ಡಿಗಳನ್ನು ಎದುರಿಸಬೇಕಾಯಿತು, ಆ ಅಡ್ಡಿಗಳನ್ನು ಅವನು ಜಯಿಸಲೇ ಬೇಕಿತ್ತು. ಈ ಪಾಠಗಳಲ್ಲಿ ಪೌಲನ ಸೇವೆಯ ಪ್ರಥಮ ದಿವಸಗಳ ಬಗ್ಗೆ ಮುಂದುವರಿಸುತ್ತೇವೆ. ಅದನ್ನು ಮಾಡುವಾಗ ಪೌಲನು ಎದುರಿಸಿದ ಕೆಲವು ಅಡ್ಡಿಗಳ ಬಗ್ಗೆ ಅಭ್ಯಾಸಿಸೋಣ. ಕ್ರಿಸ್ತನಲ್ಲಿರುವ ಕೂಸುಗಳು ಅವನಂತೆಯೇ ಅಡ್ಡಿಗಳನ್ನು ಎದುರಿಸುವಾಗ, ಅವರ ಮೇಲಿನ ಜಯವನ್ನು ಕುರಿತು ಯೋಚಿಸೋಣ.

## ಅಧೈರ್ಯವೆಂಬ ಅಡ್ಡಿ (9:19-22)

ಒಂದು ಮಗು ಮೊದಲನೆಯ ಹೆಜ್ಜೆಯನ್ನು ಇಡುವಾಗ, ಅದರ ತಂದೆತಾಯಿಗಳಲ್ಲಿ ಎಲ್ಲಿಲ್ಲದ ಆನಂದವಾಗುತ್ತದೆ. ಅದು ಒಂದು ಹೆಜ್ಜೆಯನ್ನು ಇಡುತ್ತಾ ಮುಗ್ಗರಿಸುತ್ತದೆ, ಅದು ಒಂದು, ಎರಡು, ಮತ್ತು ಮೂರನೆಯ ಹೆಜ್ಜೆಯನ್ನು ಇಡುತ್ತಾ ಪ್ರಗತಿ ಸಾಧಿಸುತ್ತದೆ. ನನ್ನ ಎರಡನೆಯ ಮಗಳಾದ ಡೆಬ್ಬಿಯ ಹೆಜ್ಜೆಗಳನ್ನು ನಮ್ಮ ಮನೆಯ ಚಲನ ಚಿತ್ರದಲ್ಲಿ ನಾನು ನೋಡಿ ರುವೆನು. ಅವಳು ನಡೆಯುವದಕ್ಕಿಂತಲೂ, ಹೆಚ್ಚು ಓಡುತ್ತಿದ್ದಳು. (ಈಗಲೂ ಓಡುತ್ತಿರುವಳು!) ನಮ್ಮ ಚಲನ ಚಿತ್ರದಲ್ಲಿ, ಅವಳು ಹೆಜ್ಜೆಗಳನ್ನಿಡುವಾಗ, ಮುಗ್ಗರಿಸುತ್ತಿದ್ದಳು. ಇದನ್ನು ಯೋಚಿ ಸುವಾಗ; ಎರಡು ಮೂರು ಪ್ರಯತ್ನಗಳಲ್ಲಿ ಡಬ್ಬಿ ಎದ್ದು ನಿಲ್ಲದೆ ಹೋಗಿದ್ದರೆ? ಈ ದಿವಸ ಅವಳನ್ನು ಸ್ಥಳದಿಂದ ಸ್ಥಳಕ್ಕೆ ನಾವು ಎತ್ತಿಕೊಂಡು ಹೋಗಬೇಕಿತ್ತು!

ಕೂಸುಗಳು ಎದ್ದು ನಡೆಯುವಂತೆಯೇ, ಕ್ರಿಸ್ತನಲ್ಲಿರುವ ಕೂಸುಗಳು ಸಹ ಎದ್ದು ನಡೆದಾಡ ಬೇಕು - ಅವರು ಏಳುವರು ಮತ್ತು ಬೀಳುವರು, ಅಥವಾ ಆಗಾಗ್ಗೆ ಬೀಳ ಬಹುದು. “ಹೊಸ ಕ್ರೈಸ್ತರು ಕ್ರೈಸ್ತರ ನಿಯಮಗಳಿಂದ ಹಾಗು ಸೇವೆಯಿಂದ ಬೀಳುವರು ಎಂಬ ಪ್ರಶ್ನೆಯಾಗಿರದೆ?” ವಾಕ್ಯವು ಮತ್ತು ನಮ್ಮ ಅನುಭವವು ನಮಗೆ ತಿಳಿಸುವಂತಾಗಿರುತ್ತೇ. ಪ್ರಮುಖವಾದ ಪ್ರಶ್ನೆ ಏನೆಂದರೆ “ಅವರು ಬಿದ್ದಾಗ ಪುನಃ ಅವರು ಎದ್ದು *ನಡೆಯಲು ಪ್ರಯತ್ನಿಸುತ್ತಿರುವರೇ?*”

ಪೌಲನು, ದಮಸ್ಕದ ಮತ್ತು ಯೆರುಸಲೇಮಿನ ಪ್ರಾಥಮ ಸೇವೆಯಲ್ಲಿ ಅವನು ಸಫಲನಾಗಲಿಲ್ಲ. ನಂತರ ಅವನು ಬರೆದು, ಅವನ ಬಲಹೀನತೆಯ ಸಲುವಾಗಿ, ಮಧ್ಯರಾತ್ರಿಯಲ್ಲಿ ದಮಸ್ಕದಿಂದ ತಪ್ಪಿಸಿಕೊಂಡನು ಎಂದು ಬರೆದಿರುವನು (2 ಕೊರಿಂಥ 11:30, 32, 33). ಮುಂದೆ ಅವನು ಯೆರುಸಲೇಮಿನಿಂದ ತಪ್ಪಿಸಿಕೊಂಡ ಕುರಿತು ಹೇಳು ವಾಗ, ತ್ವರೆಪಟ್ಟು ಹೋದೆನು ಎಂದು ಹೇಳಿರುವನು (ಅಪೊಸ್ತಲರ ಕೃತ್ಯಗಳು 22:17-21). *ಸೌಲನು ಅವನಿಗೆ ಅಡ್ಡಿಯಾದವುಗಳನ್ನು ನಂಬಿಕೆಯಿಂದ ಜಯಿಸಿದನು.* ಅವನು ಹಿಂಜರಿದ ಹೋಗದೆ, ಪ್ರಯತ್ನಿಸಿ, ಮುಂದುವರಿದನು.

ನೀವು ನಿಮ್ಮ ಕೃಸ್ತ ಜೀವನವನು ಆರಂಭಿಸುವಾಗ, ಪೌಲನ ಮಾದರಿಯನ್ನು ಅನುಸರಿಸಿರಿ: ಅಸಫಲತೆಯು ನಿಮ್ಮನ್ನು ಅಂತ್ಯಗೊಳಿಸದಿರಲಿ. ನೀವು ಬೀಳುವುದಾದರೆ, ಎದ್ದು

ಮುಂದಾಗಲು[1] ಪ್ರಯತ್ನಿಸಿರಿ. ಕಲಿಯಲು ಇದೇ ಮಾರ್ಗವಾಗಿರುತ್ತದೆ. ಎಲ್ಲವನ್ನು ಬಿಟ್ಟು ಏನನ್ನು ಮಾಡದೆ ಇರುವದು ಕ್ಷೆಮವೇ, ಆದರೆ ಅದು ನಿಮ್ಮ ಆತ್ಮೀಕ ಜೀವಿತವನ್ನು ಕುಂಠಿತಗೊಳಿಸುತ್ತದೆ, ಮತ್ತು ಇತರರನ್ನು ಅವಲಂಭಿಸುವಂತೆ ಮಾಡುತ್ತದೆ![2]

ನಾನು ಮತ್ತು ನನ್ನ ಹೆಡತಿಯು, ಕೆಲವು ಕಾಲ ರೋಮೇನೀಯಾದ, ಬ್ರಾಸೋವ್ ನಲ್ಲಿ ಇದ್ದೆವು. ಅಲ್ಲಿರುವ ನೂತನ ಕ್ರೈಸ್ತರ ವೃದ್ಧಿಯ ಬಗ್ಗೆ ನನ್ನಲ್ಲಿ ಮೆಚ್ಚುಗೆವುಂಟಾಯಿತು. ಅವರ ಆರಾಧನೆಯಲ್ಲಿ, ಪ್ರತಿ ಯೌವನಸ್ಥರು ವಾಕ್ಯವನ್ನು ಓದುತ್ತಿದ್ದರು, ಪ್ರಾರ್ಥಿಸುತ್ತಿದ್ದರು, ಹಾಡುತ್ತಿದ್ದರು, ಸಣ್ಣ ಸಾಕ್ಷಿಯನ್ನು ನೀಡುತ್ತಿದ್ದರು. ಅವರು ಅದೆಲ್ಲವನ್ನು ಮಾಡುವಲ್ಲಿ "ಪರಿಪೂರ್ಣರಾಗಿರಲಿಲ್ಲ" ನಾಚಿಕೆ ಸ್ವಭಾವವನ್ನು ಹತ್ತಿಕ್ಕಲು ಪ್ರಯತ್ನಿಸುತ್ತಿದ್ದರು. ಅವರು *ಪ್ರಯತ್ನದಿಂದ* ವೃದ್ಧಿಯಾಗುತ್ತಿದ್ದರು - ಅದರಲ್ಲಿ ತಪ್ಪುಗಳು ಒಳಗೊಂಡಿದ್ದವು!

## ಹಿಂಸೆಯ ಅಡ್ಡಿ (9:23-25)

ನಮ್ಮ ಹಿಂದಿನ ಪಾಠದಲ್ಲಿ ದೀಕ್ಷಾಸ್ನಾನ ಹೊಂದಿದ ಸೌಲನು, ದಮಸ್ಕದ ಸಭಾಮಂದಿರದಲ್ಲಿ ಪ್ರಸಂಗಿಸಲು ಪ್ರಾರಂಭಿಸಿದನು. ನಂತರ ಅವನು ಅರಬಸ್ಥಾನಕ್ಕೆ ಕೆಲವು ಕಾಲ ಹೋದನು ಎಂಬ ಅಂಶವನ್ನು ನೋಡಿದ್ದೇವೆ. ಅರಬಸ್ಥಾನದಿಂದ ಹಿಂದಿರುಗಿದ ನಂತರ ದಮಸ್ಕದಲ್ಲಿ ಪ್ರಸಂಗಿಸುತ್ತಿದ್ದನು. "ಅನೇಕ ದಿವಸಗಳು ಹೋದ ಮೇಲೆ ಯೆಹೂದ್ಯರು ಅವನನ್ನು ಕೊಲ್ಲಬೇಕೆಂದು ಆಲೋಚನೆ ಮಾಡಿದರು" (ವಚನ 23). ವಾಗ್ವದಗಳಿಂದ ಅವನ ನಾಲಿಗೆಯನ್ನು ನಿಶಬ್ಧಪಡಿಸಲು ಅಸಾಧ್ಯವಾದಾಗ, ಅವನನ್ನು ಕೊಲ್ಲಲು ಪ್ರಯತ್ನಿಸಿದರು.[3] ಒಬ್ಬರು ಹೇಳಿರುವಂತೆ "ಕೊಲೆಯ ಮೂಲಕ ಕೆಲವು ಸಾಕ್ಷಾಧಾರಗಳನ್ನು ನಾಡಪಡಿಸುತ್ತದೆ."[4]

ವಚನ 24ರಲ್ಲಿ, "ಅವರ ಆಲೋಚನೆಯು ಸೌಲನಿಗೆ ತಿಳಿಯಿತು.[5] ಅವರು (ಯೆಹೂದ್ಯರು) ರಾತ್ರಿ ಹಗಲು ಊರುಬಾಗಿಲಿನಲ್ಲಿ ಅವನನ್ನು ಕೊಲ್ಲುವದಕ್ಕೆ ಕಾಯುತ್ತಿದ್ದರು." ಕೊರಿಂಥವರಿಗೆ ಬರೆಯುವಾಗ ಪೌಲನು ಈ ಕೆಳಕಂಡ ಗೊಂದಲದ ಮಾತನ್ನು ತಿಳಿಸಿರುವನು: "ದಮಸ್ಕದಲ್ಲಿ[6] ಅರಬಸ್ಥಾನದ ಅರಸನಾದ ಅರೆಯಥನ[7] ಅಸೀನದಲ್ಲಿದ್ದ ಅಧಿಪತಿಯು ನನ್ನನ್ನು ಹಿಡಿಯ ಬೇಕೆಂದು ದಮಸ್ಕದವರ ಪಟ್ಟಣವನ್ನು ಕಾಯುತ್ತಿರಲು" (2 ಕೊರಿಂಥ 11:32). ಇದನ್ನು ಎನೆಂಬುದಾಗಿ ಕರೆಯುತ್ತೀರಿ ಏಕೆಂದರೆ, ಮೊದಲನೆಯದಾಗಿ, ಅರಬಸ್ತಾನದ ಅರಸನಾದ ಅರೇತನು ದಮಸ್ಕದಲ್ಲಿ ಯಾವ ವಿಧವಾದ ಅಧಿಕಾರವನ್ನು ಹೊಂದಿದ್ದನು ಎಂಬ ಅರಿವು ನಮಗಿರುವದಿಲ್ಲ, ಏಕೆಂದರೆ ಆ ಆಡಳಿತವು ರೋಮಾಯರಿಗೆ ಒಳಪಟ್ಟಿತ್ತು.[8] ಅದು ಇನ್ನು ಹೆಚ್ಚು ಗೊಂದಲಮಯವಾಗಿದೆ. ಆದರೂ ಯೆಹೂದ್ಯರು ಮತ್ತು ಅರಬಸ್ಥಾನದವರು ಒಟ್ಟಾಗಿ ಕೂಡಿ ಸೌಲನನ್ನು ಕೊಲ್ಲಲು ಪ್ರಯಾತ್ನಿಸಿದರು! ಆದರೆ ಯೆಹೂದ್ಯರು ಮತ್ತು ಅರಬ್ಬರು ಒಟ್ಟಾಗಿ ಕೂಡಿಬರುವದು ಅಸಹಜವಾಗಿದೆ![9] ಬಹುಶಃ ದಮಸ್ಕದಲ್ಲಿ ಯೆಹೂದ್ಯರು ಹೆಚ್ಚಿನ ರಾಜಕೀಯ ಪ್ರಭಾವವನ್ನು ಹೊಂದಿರಬಹುದು,[10] ಪ್ರಯಶ ಯೆಹೂದ್ಯರು ಮತ್ತು ಅರಬ್ಬರು ಸೌಲನು ಅವರಿಗೆ ಅಡ್ಡಿ ಎಂಬುದಾಗಿ ತಿಳಿದಿರಬಹುದು.[11] ಕಾರಣವೇನೆ ಇದ್ದರೂ ದಮಸ್ಕದವರೆಲ್ಲರೂ ಸೇರಿ ಸೌಲನನ್ನು ಕೊಲ್ಲಲು ಪ್ರಯತ್ನಿಸಿದರು!

ಸೌಲನು ತಪ್ಪಿಸಿಕೊಂಡ ಕಾರ್ಯವು ಹೊಸ ಒಡಂಬಡಿಕೆಯಲ್ಲಿ ಅತಿ ಪ್ರಚಲಿತವಾದ ವಿಷಯವಾಗಿದೆ: "ಆದರೆ ಅವನ ಶಿಷ್ಯರು ರಾತ್ರಿ ಕಾಲದಲ್ಲಿ ಅವನನ್ನು ಕರೆದುಕೊಂಡು[12] ಹೋಗಿ ಒಂದು ಹೆಡಿಗೆಯಲ್ಲಿ ಕೂಡ್ರಿಸಿ ಗೋಡೆಯೊಳಗಿಂದ ಇಳಿಸಿದರು" (ಅಪೊಸ್ತಲ ಕೃತ್ಯಗಳು 9:25). ಪೌಲನು ನಂತರ ಬರೆದು "ನಾನು ಒಂದು ಕಲ್ಲಿಯಲ್ಲಿ[13] ಕೂತು ಗೋಡೆಯಲ್ಲಿದ್ದ ಕಿಟಿಕಿಯೊಳಗಿಂದ ಇಳಿಸಲ್ಪಟ್ಟು ಅವನ ಕೈಯಿಂದ ತಪ್ಪಿಸಿಕೊಂಡೆನು" (2 ಕೊರಿಂಥ 11:33). ಆ ದಿವಸಗಳಲ್ಲಿ ಮನೆಗಳನ್ನು ಪಟ್ಟಣದ ಗೋಡೆಗಳಿಗೆ ಸೇರಿಸಿ ಕಟ್ಟುತ್ತಿದ್ದದ್ದು ಸರ್ವೆಸಾಮ್ಯಾವಾಗಿತ್ತು (ಯೆಹೋಶುವ 2:15). ಸೌಲನ ಸುತ್ತಲೂ ಸ್ನೇಹಿತರು

ಸೇರಿಕೊಂಡು, ಆ ಪಟ್ಟಣದ ಗೋಡೆಯ ಬಳಿಯಲ್ಲಿ ಚರ್ಚಿಸುತ್ತಾ ತುರ್ತಾದ ಯೋಜನೆಯನ್ನು ಮಾಡಿದರು. ಕೊನೆಯದಾಗಿ, ಒಬ್ಬನು ಕೊಠಡಿಯೊಳಗಿಂದ ಹೊರಹೋಗಿ ದಪ್ಪದಾದ ಹಗ್ಗದ ಸಿಂಬಿಯನ್ನು ಹೆಗಲ ಮೇಲೆ ಹೊತ್ತುಕೊಂಡು ಹಿಂದಿರುಗಿದನು. ಅದರ ಜೊತೆಯಲ್ಲಿ ದೊಡ್ಡವಾದ ಬುಟ್ಟಿಯನ್ನು ತಂದಿದ್ದನು. ಬುಟ್ಟಿಯೊಳಗಿದ್ದಂತದ್ದೆಲ್ಲವನ್ನು ಹೊರಗೆ ಸುರಿದು ಮತ್ತು ಪೌಲನಿಗೆ "ಅದರೊ ಳಗೆ ಕೂತುಕೊಳ್ಳಲು ತಿಳಿಸಿದನು!" ಕೆಲವೆ ಕ್ಷಣಗಳಲ್ಲಿ, ಸೌಲನನ್ನು ಗೋಡೆಯ ಕಿಟಕಿಯ ಮೂಲಕ ಕೆಳಗೆ ಇಳಿಸಲಾಯಿತು. ಆ ಕತ್ತಲೆಯಲ್ಲಿ ಅವನು ಹೊಯ್ದಾಡುತ್ತಾ ಸಮಯದಿಂದ ಸಮಯಕ್ಕೆ ಗೋಡೆಗಳನ್ನು ಸ್ಪರ್ಶಿಸುತ್ತಾ, ಅಂತಿಮವಾಗಿ ನೆಲವನ್ನು ಬುಟ್ಟಿಯ ಮೂಲಕ ತಲುಪಿದನು.

ನಾನು ಚಿಕ್ಕವನಿರುವಾಗ, ಪೌಲನು ಈ ರೀತಿಯಾಗಿ ತಪ್ಪಿಸಿಕೊಂಡಂತಹ ವಿಷಯವು ಉತ್ಸಾಹದ ಸಾಹಸವೆಂದು ತಿಳಿದಿದ್ದೆನು. ಆದರೆ ಪೌಲನಿಗೆ ಅದು ಉತ್ಸಾಹವಾಗಿರದೆ, ಅವಮಾನಕರವಾಗಿತ್ತು![14] ಈ ಹಿಂದೆ ಅವನು ಅಧಿಕಾರದಿಂದಲೂ ಪೌರುಷದಿಂದಲೂ ದಮಸ್ಕವನ್ನು ಪ್ರವೇಶಿಸಿ ಮತ್ತು ದೊಡ್ಡ ಬಲದಿಂದ ಹಿಂದಿರುಗಲು ಯೋಜಿ ಸಿದ್ದನು (ಕ್ರೈಸ್ತರು ಸರಪಳಿಗೆಳಿಂದ ವಿಳೆಯಲ್ಪಟ್ಟು ಆಳುವ ಪರಿಸ್ಥಿತಿ). ಅದರ ಬದಲಾಗಿ ಪಟ್ಟಣವನ್ನು ಕುರುಡ ಭಿಕ್ಷುಕನಂತೆ ಪ್ರವೇಶಿಸಿ, ಈಗ ಅಪರಾಧಿಯಂತೆ ತಪ್ಪಿಸಿಕೊಂಡನು!

ತಪ್ಪಿಸಿಕೊಂಡಂತ ಪೌಲನನ್ನು, ನಾನು ಸಂಧಿಸಿದ್ದೆಯಾಗಿದ್ದರೆ, ಅವನ ಕೋಪವು ತಗ್ಗುವತನಕ ಒಂದು ಗುಪ್ತವಾದ ಸ್ಥಳದಲ್ಲಿ ಅಡಗಿಸಿಕೊಂಡಿರುತ್ತಿದ್ದೆನು. ಸೌಲನಾದರೋ ದಮಸ್ಕಲಿಂತಲೂ ಹೆಚ್ಚಿನ ದ್ವೇಷವನ್ನು *ಯೆರೂಸಲೇಮಿನ* ಕಡೆಗೆ ಮುಂದುವರೆಸುತ್ತಿದ್ದನು.

*ಸೌಲನು ಹಿಂಸೆಯೆಂಬ ಅಡ್ಡಿಯನ್ನು ಧೀರ್ಘಶಾಂತಿಯಿಂದ ಎದುರಿಸಿದನು.* ಯೇಸು ತಿಳಿಸಿರುವಂತೆ "ಮತ್ತೆ ಕೆಲವರು ವಾಕ್ಯವನ್ನು ಕೇಳಿಸುಗುಣವುಳ್ಳ ಒಳ್ಳೇಯ ಹೃದಯದಲ್ಲಿ ಇಟ್ಟು ಕೊಂಡು ತಾಳ್ಮೆಯಿಂದ ಫಲವನ್ನು ಕೊಡುತ್ತಾರೆ" (ಲೂಕ 8:15).

ಕ್ರೈಸ್ತನಾಗಿರುವಂತಹದ್ದು ಇಲ್ಲಿಯೂ ಮತ್ತು ಮುಂದೆಯೂ ಇರುವ ಜೀವಿತಕ್ಕೆ ಆಶೀರ್ವಾದವಾಗಿರುತ್ತದೆ - ಆದರೆ ಕ್ರೈಸ್ತ ಜೀವಿತವು ಸುಲಭವಾಗಿದೆಂದರ್ಥವಲ್ಲ ಕೆಲವರು ನಿಮ್ಮ ಕ್ರೈಸ್ತ ಜೀವಿತವನ್ನು ನಾಶಮಾಡಲು ಪ್ರಯತ್ನಿಸಿ ಅಧೈರ್ಯಗೊಳಿಸ ಬಹುದು! ಆ ಸಮಯದಲ್ಲಿ, ನೀವು ನೆನಪಿಸುವ ಸಂಗತಿಯೇನೆಂದರೆ: "ಸೈತಾನನು ಅಸಂಬದ್ಧವಾದ ಜನರ ಬಗ್ಗೆ ಯೋಚಿಸುವದಿಲ್ಲ!" ಒಬ್ಬ ಸ್ನೇಹಿತನ ನೆನಪು ನನಗೆ ಉಂಟಾಗುತ್ತದೆ.[15] ಈ ಯೌವನಸ್ಥನಿಗೆ ನಾನು ದೀಕ್ಷಾಸ್ನಾನ ಮಾಡಿಸಿದಾಗ, ಅದು ಆನಂದಕರವೂ ಮತ್ತು ಅವನ ಎಲ್ಲಾ ಪರಿಚಯಸ್ಥರು ಇವನ ಕುರಿತು ಸಯೋಷಪಟ್ಟರೆಂದು ಯೋಚಿಸಿದನು; ಆದರೆ ಅವನ ಸ್ನೇಹಿತರು ಇವನನ್ನು ಮೂರ್ಖನೆಂದು ತಿಳಿದಾಗ, ಅವನ ಕುಟುಂಬಕ್ಕೆ ಅವಮಾನವುಂಟಾಯಿತು. ಎಲ್ಲರೂ ಹೊಸ ಒಡಂಬಡಿಕೆಯ ಬೋಧನೆಯನ್ನು ಒಪ್ಪಿಕೊಳ್ಳುವರೆಂದು ತಿಳಿದು, ಅವರೆಲ್ಲರನ್ನು ಪರಿವರ್ತಿಸಲು ಪ್ರಯತ್ನಿಸಿದನು - ಆದರೆ ಅವರಾರೂ ಅವನ ಯೋಚನೆಯಜೊಯಾಗಲಿಲ್ಲ. ಇತರರು ಅವನನ್ನು ಅಧೈರ್ಯಗೊಳಿಸುವ ಸಮಯದಲ್ಲಿ ಅವನು ಪುನಃ ಎದ್ದುನಿಲ್ಲಲು ಪ್ರಯತ್ನಿಸಿದನು. ಅವನ ಧೀರ್ಘಶಾಂತಿಯ ನಿಮಿತ್ತವಾಗಿ ಅವನ ಸಭೆಯಲ್ಲಿ ಈ ದಿವಸ ಒಳ್ಳೇಯ ವರ್ಚಸ್ಸನ್ನು ಹೊಂದಿರುವಂತಹ ಪ್ರಭಾವಿ ವ್ಯಕ್ತಿಯಾಗಿದ್ದಾನೆ!

## ಕಳೆದು ಸಂಧುಹೋದ ಅಡ್ಡಿಗಳು (9:26-28)

ಸೌಲನು ಯೆರೂಸಲೇಮಿನ ಪ್ರಯಾಣವನ್ನು ಕೈಗೊಂಡಾಗ, ಮೂರು ವರ್ಷಗಳ ಹಿಂದೆ ಕರ್ತನು ಅವನಿಗೆ ಕಾಣಿಸಿಕೊಂಡ ಸ್ಥಳವನ್ನು ಹಾದು ಹೋಗಿರಬಹುದು.[16] 140 ಮೈಲುಗಳಷ್ಟು ಪ್ರಾಯಾಣಿಸಿದಾಗ, ಯೆರೂಸಲೇಮಿನ ಗೋಡೆಗಳು ಗೋಚರಿಸಿರಬಹುದು. ಬಹುಶಃ ಯೇಸು ಕ್ರೂಜಿತನಾದ ಕಲ್ವಾರಿ ಗುಡ್ಡವನ್ನು ಹಾದು ಹೋಗಿರಬಹುದು. ಕಲ್ಲುಗಳಿಂದ ಕೊಲ್ಲಲ್ಪಟ್ಟಂಥ ಸ್ತೇಫನನ ಮರಣದ ಸ್ಥಳವನ್ನು ಹಾದು ಹೋಗಿರಬಹುದು. ಅವನ ಆತ್ಮದಲ್ಲಿ

ಎಂಥಾ ವಿಧವಾದ ಉದ್ವೇಗ ಉಂಟಾಗಿರಬಹುದು!

ಅವನು ಸ್ನೇಹಿತ ರಹಿತನಾಗಿ ಯೆರೂಸಲೇಮನ್ನು ಪ್ರವೇಶಿಸಿದನು. ಅವನು ಯೆಹೂದ್ಯ ನಂಬಿಕೆಯನ್ನು ನಿರಾಕರಿಸಿದ್ದರಿಂದ ಅವರ್ಯಾರು ಇವನ ಸಹವಾಸವನ್ನು ಬಯಸಲಿಲ್ಲ, ಕ್ರೈಸ್ತರಾರು ಅವನ ಸಹವಾಸವನ್ನು ಬಯಸಲಿಲ್ಲ ಏಕೆಂದರೆ, ಅವನು ಯೆಹೂದ್ಯ ನಂಬಿಕೆಯನ್ನು ತೊರೆದಿರುವ ವಿಷಯದಲ್ಲಿ ಸಂದೇಹ ಉಂಟಾಗಿತ್ತು! "ಅವನು ಯೆರೂಸಲೇಮಿಗೆ ಬಂದಾಗ ... ಶಿಷ್ಯರೆಲ್ಲರೂ ...[17] ಅವನನ್ನು ಶಿಷ್ಯನೆಂದು ನಂಬದೆ ಅವನಿಗೆ ಭಯಪಟ್ಟರು"[18] (9:26). ಅವನು ಅಪೊಸ್ತಲನೆಂದು; ಮಾತ್ರ ನಂಬದೆ, ಅವನ ಕ್ರೈಸ್ತತ್ವವನ್ನೇ ಸಂಶಯ ಪಟ್ಟರು! ಅವನು "ಪರಿವರ್ತನೆ" ಹೊಂದಿದವನೆಂಬ ಕಾರಣದಿಂದ ಕ್ರೈಸ್ತರ ವಿಶ್ವಾಸವನ್ನು ಗಳಿಸಿ, ಕ್ರೈಸ್ತರು ಇರುವ ಸ್ಥಳವನ್ನು ತಿಳುಕೊಂಡವನಾಗಿ, ಅವರನ್ನು ಯೆರೂಸಲೇಮಿಗೆ ಎಳೆದುಕೊಂಡು ಹೋಗಿ ಸೆರೆಮನೆಗೆ ಹಾಕುವ ಯೋಜನೆಯನ್ನು ಅವನು ಹೊಂದಿದ್ದನೆಂದು ಕ್ರೈಸ್ತರು ತಿಳಿದಿದ್ದರು!

ನಾವು ಸೌಲನ ಪರಿಸ್ಥಿತಿಯಲ್ಲಿದ್ದದ್ದರೆ, ನಾವೆಲ್ಲರೂ, "ಸಭೆಯು ನನ್ನನ್ನು ನಿರಾಕರಿಸುವುದಾದರೆ, ನನಗೆ ಆ ಸಭೆಯ ಅಗತ್ಯವಿಲ್ಲ" ಎಂದು ಹೇಳುತ್ತಿದ್ದೇವು! - ನಾವು ಬೇಸರಗೊಂಡವರಾಗಿ ಪಟ್ಟಣದಿಂದ ಹಿಂದಿರುಗುತ್ತಿದ್ದೆವು. ಆದರೆ ಸೌಲನು ದೃಢಮನಸ್ಸನ್ನು ಹೊಂದಿದವನಾಗಿದ್ದನು. ಅವನು ಸಹಜವಾಗಿ, ಧೈರ್ಯದಾಯಕನಾದ, ಒಬ್ಬ ಸ್ನೇಹಿತನನ್ನು ಸಂಧಿಸಿದನು (4:36). ಬರ್ಟನ್ ಕಾಫ್‌ಮನರವರು ಬರೆದು, "ಸಭೆಯು ಸೌಲನನ್ನು ಸ್ವೀಕಾರ ಮಾಡದೆ ಇರುವುದು ಆಶ್ಚರ್ಯವೆ, ಆದರೆ ಗುರುತರವಾದ ವಿಷಯವೇನೆಂದರೆ ... ಆದರೆ ಒಬ್ಬನು ಅವನನ್ನು ಸಂಪೂರ್ಣವಾಗಿ ನಂಬಿ, ಅವನಲ್ಲಿ ಉಂಟಾದ ಸಮಾಧಾನವನ್ನು ಸಭೆಗೆ ಪ್ರಚುರಪಡಿಸಲು ಧೈರ್ಯಗೊಂಡವನಾಗಿದ್ದನು."[19] ಅವನೇ ಬಾರ್ನಬನು:

> ಆದರೆ ಬಾರ್ನಬನು ಅವನನ್ನು ಕೈಹಿಡಿದು ಅಪೊಸ್ತಲರ[20] ಬಳಿಗೆ ಕರೆದುಕೊಂಡುಹೋಗಿ ಅವನು ದಾರಿಯಲ್ಲಿ[21] ಕರ್ತನನ್ನು ಕಂಡದ್ದನ್ನೂ ಕರ್ತನು ಅವನ ಸಂಗಡ ಮಾತಾಡಿದ್ದನ್ನೂ ದಮಸ್ಕದೊಳಗೆ ಯೇಸುವಿನ ಹೆಸರಿನಲ್ಲಿ ಧೈರ್ಯದಿಂದ ಮಾತಾಡಿದ್ದನ್ನೂ ಅವರಿಗೆ ವಿವರವಾಗಿ ಹೇಳಿದನು (ವಚನ 27).

ಬಾರ್ನಬನು, ಸೌಲನ ಕುರಿತು ಹೇಗೆ ಹೆಚ್ಚಾಗಿ ತಿಳುಕೊಂಡನು? ಸೌಲನು ಕ್ರೈಸ್ತನಾಗುವ ಮೊದಲೆ, ಬಾರ್ನಬನು ಅವನನ್ನು ಅರಿತ್ತಿದ್ದನು ಎಂಬುದು ಕೆಲವರ ಅಭಿಪ್ರಾಯ. ಬಾರ್ನಬನು ಕುಪ್ರದ್ವೀಪದವನು (4:36), ಕುಪ್ರದ್ವೀಪವು, ಕಿಲಿಕ್ಯಕ್ಕೆ ಸಮೀಪವಾಗಿತ್ತು.[22] ಒಂದು ವೇಳೆ ಅವನನ್ನು ಯೆರೂಸಲೇಮಿನಲ್ಲಿ ಈ ಹಿಂದೆ ಸಂಧಿಸಿರಬಹುದು. ಬಾರ್ನಬನು ಅವನೊಂದಿಗೆ ದಮಸ್ಕಕ್ಕೆ ಪ್ರಾಯಾಣಿಸಿ, ಅವನ ಕುರಿತು ತಿಳುಕೊಂಡನು ಎಂಬುದು ಕೆಲವರ ಅಭಿಪ್ರಾಯ.[23] ಆದರೆ ಬಾರ್ನಬನು ಕನಿಕರವುಳ್ಳವನಾಗಿ, ಉತ್ತಮವಾದ ಜನರು ಯಾರು ಎಂದು ತಿಳಿದು ಅವರನ್ನು ಪ್ರೋತ್ಸಾಯಿಸುವ ವ್ಯಕ್ತಿಯಾಗಿದ್ದನು ಎಂಬುದು ಉತ್ತಮವಾದ ವಿವರಣೆಯಾಗಿರುತ್ತದೆ.[24] ಬಾರ್ನಬನು ಸೌಲನಿಗಾಗಿ ತನ್ನ ಪ್ರಭಾವವನ್ನು ಮುಂದಿಟ್ಟನು.

ಆ ಸಮಯದಲ್ಲಿ, ಸೌಲನು ಯಾವುದೇ ವಿಧವಾದ ಸೇವೆಯ ಪ್ರಾಯಾಣವನ್ನು ಮಾಡಿರಲಿಲ್ಲ. ಅವನ ಹದಿಮೂರು ಅಥವಾ ಹದಿನಾಲ್ಕು[25] ಪತ್ರಿಕೆಗಳನ್ನಾಗಲೇ ಬರೆದಿರಲಿಲ್ಲ. ಅಲ್ಲಿ ಬಾರ್ನಬನು ಇಲ್ಲದಿದ್ದರೆ, ನಾವುಗಳು ಎಂಥಾವಿಧವಾದ ಆತ್ಮೀಕ ಜೀವನವನ್ನು ಪಡೆಯಲು ಸಾಧ್ಯವಿತ್ತು ಬಾರ್ನಬನು! ಇವನ ಕುರಿತಾಗಿ ಅಪೊಸ್ತಲರಿಗೆ ಮನವರಿಕೆಮಾಡಿದನು, ಅಪೊಸ್ತಲರು ಯೆರೂಸಲೇಮಿನ ಕ್ರೈಸ್ತರಿಗೆ ಸೌಲನ ಕುರಿತಾಗಿ ಮನವರಿಕೆ ಮಾಡಿದ್ದರಿಂದ ನಾವುಗಳು ಕೃತಜ್ಞರಾಗಿರಬೇಕು.

ಆ ಪಟ್ಟಣದಲ್ಲಿದ್ದ ಪೇತ್ರನು ಸೌಲನನ್ನು ತನ್ನ ಮನೆಗೆ ಆಹ್ವಾನಿಸಿದನು (ಗಲಾತ್ಯ 1:18). "ಆ ಮೇಲೆ ಅವನು ಯೆರೂಸಲೇಮಿನಲ್ಲಿದ್ದುಕೊಂಡು ಅವರಲ್ಲಿ ಬರುತ್ತಾ ಹೋಗುತ್ತಾ ಕರ್ತನ ಹೆಸರಿನಲ್ಲಿ ಧೈರ್ಯವಾಗಿ ಬೋಧಿಸಿದನು" (ಅಪೊಸ್ತಲರ ಕೃತ್ಯಗಳು 9:28). ತಕ್ಷಣವೆ ಈ

ಸುದ್ಧಿಯು ಆ ಪ್ರಾಂತಗಳಲ್ಲಿ ಪ್ರಾಚಾರವಾಯಿತು, "ನಮ್ಮನ್ನು ಹಿಂಸೆಪಡಿಸಿದವನು ತಾನು ಹಾಳು ಮಾಡುತ್ತಿದ್ದ ಮತವನ್ನು ಈಗ ಪ್ರಸಿದ್ಧಿಪಡಿಸುತ್ತಾನೆಂಬ ಸುದ್ಧಿಯನ್ನು ಮಾತ್ರ ಅವರು ಕೇಳಿದರು" (ಗಲಾತ್ಯ 1:23).[26]

*ಸೌಲನು ತನ್ನ ಹಿಂದಿನ ಜೀವಿತದಲ್ಲಿದ್ದ ಅಡ್ಡಿಗಳನ್ನು ತಾಳ್ಮೆಯಿಂದ ಇಲ್ಲದಂತೆ ಮಾಡಿದನು.* ಏಕೆ ಕ್ರೈಸ್ತರು ಅವನ ವಿಷಯದಲ್ಲಿ ಬೇಸರಗೊಂಡಿದ್ದರು ಎಂಬುದನ್ನು ಅರಿತನು. ನಷ್ಟಪಡಿಸಿಕೊಂಡ ಭರವಸವನ್ನು ಬಹಳ ಸಮಯದ ನಂತರ ಪುನಃ ಪಡೆಯ ಬೇಕಾಗುತ್ತದೆ. ನಿರಾಕರಣೆಯ ನಿಮಿತ್ತ ತನ್ನ ಉದ್ದೇಶವನ್ನು ವ್ಯರ್ಥಮಾಡಿಕೊಳ್ಳಲಿಲ್ಲ - ಅಂತಿಮವಾಗಿ ಅವನು ಸ್ವೀಕರಿಸಲ್ಪಟ್ಟನು. ನಿಮಗಿದ್ದಂತ ಹಳೆಯ ಅಡ್ಡಿಗಳನ್ನು ತೊರೆದು ಜೀವಿಸಲೇಬೇಕು. ನಿಮ್ಮ ಸಹೋದರರ ಕುರಿತು ತಾಳ್ಮೆಗೆಡಬೇಡಿರಿ; ಅವರ ದೃಷ್ಟಿಯಿಂದಲೇ ನಿಮ್ಮನ್ನು ಪರಿಶೀಲಿಸಿಕೊಳ್ಳೀರಿ, ಆದರೆ ತಾಳ್ಮೆಯುಳ್ಳವರಾಗಿರ್ರಿ. ಎಫೆಸೆ 4:1, 2ರ ಪೌಲನ ಸಲಹೆ ಏನೆಂದರೆ, ಆದನ್ನು ನೀಡುವವನಿಗೂ, ಮತ್ತು ಸ್ವೀಕರಿಸುವವರಿಗು ಅದು ಉತ್ತಮವೇ: "ನೀವು ದೇವರಿಂದ ಕರೆಯಲ್ಪಟ್ಟವರಾದ ಕಾರಣ ಯೋಗ್ಯರಾಗಿ ನಡೆದುಕೊಳ್ಳಬೇಕೆಂದು ಕರ್ತನ ಸೇವೆಯಲ್ಲಿ ಸೆರೆಯವನಾದ ನಾನು *ನಿಮ್ಮನ್ನು ಪ್ರಬೋಧಿಸುತ್ತೇನೆ* ನೀವು ಪೂರ್ಣ ವಿನಯ ಸಾತ್ವಿಕತ್ವಗಳಿಂದಲೂ ದೀರ್ಘಶಾಂತಿಯಿಂದಲೂ ಕೂಡಿದವರಾಗಿರಿ." (ಒತ್ತಿ ಹೇಳಿದ್ದು ನನ್ನದು.)

## ಕಠಿಣತೆ ಎಂಬ ಅಡ್ಡಿ (9:29, 30; 22:17-21)

ಸೌಲನು ಯೆರೂಸಲೇಮಿನಲ್ಲಿ ಗ್ರೀಕ್ ಭಾಷೆಯನ್ನಾಡುವ ಯೆಹೂದ್ಯರ ಸಂಗಡ[27] ಮಾತನಾಡುತ್ತಿದ್ದನು. ಸ್ತೇಫನನೂ ಸಹ ಇಲ್ಲಿಯೇ ಪ್ರಸಂಗಿಸುತ್ತಿದ್ದನು.[28] ಅಲ್ಲಿ ಅವನು ಪ್ರಸಂಗಿಸಿರುವದನ್ನು ಸಂಪೂರ್ಣಮಾಡಿರಲಿಲ್ಲ: "ಅಲ್ಲಿ ಮಾತಾಡಿ ತರ್ಕಿಸುತ್ತಿದ್ದನು, ಅವರು ಗ್ರೀಕ್ ಭಾಷೆಯ[29] ಯೆಹೂದ್ಯರಾಗಿದ್ದರು" (9:29ಎ) ಅಪೊಸ್ತಲರ ಕೃತ್ಯಗಳು 6ರಲ್ಲಿ ಮಾತ್ರ ಗ್ರೀಕ್ ಭಾಷೆಯ "ತರ್ಕ" ಎಂಬ ಪದವನ್ನು ನೋಡುತ್ತೇವೆ, ಅಲ್ಲಿಯೂ ಸಹ ಗ್ರೀಕ್ ಭಾಷೆಯ ಯೆಹೂದ್ಯರು, "*ಸ್ತೇಫನನೊಂದಿಗೂ* 'ತರ್ಕ' ಮಾಡಿದ್ದರು" (6:9; ಒತ್ತಿ ಹೇಳಿದ್ದು ನನ್ನದು). ಸ್ತೇಫನನ ಕೆಲಸವನ್ನು ಪೂರ್ಣಮಾಡಲು ಸೌಲನು ಹಿಂದಿರುಗಿದನು.

ಗ್ರೀಕ್ ಮಾತನಾಡುವ ಯೆಹೂದ್ಯರ ಸ್ಥಳವು, ಪೌಲನಿಗೆ ಅಪಾಯಕಾರಿಯಾದ ಸ್ಥಳವಾಗಿತ್ತು ಅವರುಗಳು ಸ್ತೇಫನನ ಮುಂದೆ ನಿಲ್ಲಲಾರದೆ ಹೋದಾಗ, ಅವರು ಅವನನ್ನು ದ್ವೇಷಿಸಿಕೊಂದರು. ಅವನು ಸೌಲನನ್ನು ಇನ್ನೂ ಹೆಚ್ಚಾಗಿ ದ್ವೇಷಿಸಿದರು, ಏಕೆಂದರೆ ಅವನು ಅವರ ದೃಷಿಯಲ್ಲಿ, ಅವರನ್ನು ತೊರೆದವನು ಮತ್ತು ಅಡ್ಡಿಯೂ ಆಗಿದ್ದನು![30] ಆದ್ದರಿಂದ "ಅವರು ಅವನನ್ನು ಕೊಲ್ಲಲು ಪ್ರಯತ್ನಿಸಿದರು" (9:29ಬಿ)! ಅವರು ಸೌಲನನ್ನು ದ್ವೇಷಿಸುವಂತೆ ಮಾಡಲು, ಮೂರು ವರ್ಷಗಳ ಕಾಲ ಅರಬ್ಬ ಸ್ಥಳದಲ್ಲೂ, ದಮಸ್ಕದಲ್ಲೂ ಇರಬೇಕಾಯಿತು. ಆದರೆ ಯೆರೂಸಲೇಮಿನಲ್ಲಿ ಎರಡುವಾರಗಳ ಅಂತರದಲ್ಲೇ ದ್ವೇಷಕೊಳ್ಳಗಾದನು (ಗಲಾತ್ಯ 1:18).

ದೇವರ ತಿಳುವಳಿಕೆಯಿಂದ, ತನ್ನ ಕೊಲೆಯ ಪ್ರಯತ್ನವನ್ನು ಅರಿತುಕೊಂಡಾಗ, ಅವನ ಕ್ರೈಸ್ತ ಸ್ನೇಹಿತರು ಅವನನ್ನು ಕಾಪಾಡಲು ಮುಂದಾವರು "ಇದು ಸಹೋದರರಿಗೆ ತಿಳಿದು ಬರಲು ಅವರು ಅವನನ್ನು ಕೈಸರೆಯಕ್ಕೆ ಕರಕೊಂಡು ಹೋಗಿ ಅಲ್ಲಿಂದ ತಾರ್ಸಕ್ಕೆ ಕಳುಹಿಸಿದರು" (9:30). ಕೈಸರೆಯು ಪಾಲಿಸ್ತೇನಿನ ಸಮುದ್ರ ತೀರದಲ್ಲಿದ್ದು. ಯೆರೂಸಲೇಮಿನ ಈಖಾನ್ಸ್ ದಿಕ್ಕಿಗೆ ಎಪ್ಪತ್ತು ಮೈಲಿಗಳ ಅಂತರದಲ್ಲಿತು.[31] ತಾರ್ಸವು ಪೌಲನ ವಾಸಸ್ಥಳವಾಗಿತ್ತು.[32]

ಅಪೊಸ್ತಲರ ಕೃತ್ಯಗಳು 9ರಲ್ಲಿ ತಿಳಿಸದೆ ಇರುವ: ಅವನ ಯೆರೂಸಲೇಮಿನ ಪ್ರಾಯಾಣದ ಕುರಿತು ಅಪೊಸ್ತಲರ ಕೃತ್ಯಗಳು 22ರಲ್ಲಿ ತಿಳಿಸಲಾಗಿದೆ.[33] ಗ್ರೀಕ್ ಭಾಷೆಯ ಯೆಹೂದ್ಯರು ಅವನನ್ನು ಕೊಲ್ಲಲು ಯೆರೂಸಲೇಮಿನಲ್ಲಿ ಪ್ರಯತ್ನಿಸುತ್ತಿರುವಾಗ, ಯೆರೂಸಲೇಮಿನಲ್ಲಿ

ತಂಗುವದು ಪೌಲನಿಗೆ ಬಿಟ್ಟ ವಿಷಯವಾಗಿತ್ತು ಎಂದು ಅಪೊಸ್ತಲರ ಕೃತ್ಯಗಳು 22ರಲ್ಲಿ ನೋಡುತ್ತೇವೆ.

> ಅನಂತರದಲ್ಲಿ ನಾನು ಯೆರೂಸಲೇಮಿಗೆ ಹಿಂತಿರುಗಿ ಬಂದು ದೇವಾಲಯದೊಳಗೆ ಪ್ರಾರ್ಥನೆ ಮಾಡುತ್ತಿದ್ದಾಗಧ್ಯಾನಪರವಶನಾಗಿ ಯೇಸುವನ್ನು ಕಂಡೆನು. ಆತನು - ನೀನು ತ್ವರೆಪಟ್ಟು ಬೇಗನೆ ಯೆರೂಸಲೇಮಿನಿಂದ ಹೊರಟುಹೋಗು,[34] ನನ್ನ ವಿಷಯದಲ್ಲಿ ನೀನು ಹೇಳುವ ಸಾಕ್ಷಿಯನ್ನು ಅವರು ಅಂಗೀಕರಿಸುವದಿಲ್ಲ ಅಂದನು. ಅದಕ್ಕೆ ನಾನು - ಕರ್ತನೇ, ಎಲ್ಲಾ ಸಭಾಮಂದಿರಗಳಲ್ಲಿ ನಿನ್ನ ಮೇಲೆ ನಂಬಿಕೆಯಿಟ್ಟವರನ್ನು ನಾನು ಸೆರೆಮನೆಯಲ್ಲಿ ಹಾಕಿಸುತ್ತಾ ಹೊಡಿಸುತ್ತಾ ಇದ್ದೆನೆಂಬದನ್ನು ಅವರೇ ತಿಳಿದಿದ್ದಾರೆ; ಮತ್ತು ನಿನ್ನ ಸಾಕ್ಷಿಯಾದ ಸ್ತೆಫನನ ರಕ್ತವು ಚೆಲ್ಲಿಸಲ್ಪಟ್ಟಾಗ ನಾನೂ ಹತ್ತಿರ ನಿಂತು ಒಪ್ಪಿಕೊಂಡು ಅವನನ್ನು ಕೊಂದವರ ವಸ್ತ್ರಗಳನ್ನು ಕಾಯುತ್ತಿದ್ದೆನಲ್ಲಾ ಅಂದೆನು. ಆತನು - ನೀನು ಹೋಗು, ನಾನು ನಿನ್ನನ್ನು ದೂರಕ್ಕೆ ಅನ್ಯಜನರ ಬಳಿಗೆ ಕಳುಹಿಸುತ್ತೇನೆಂದು ಹೇಳಿದನು (ಅಪೊಸ್ತಲರ ಕೃತ್ಯಗಳು 22:17-21).

"ದೇವರೇ ಅವರಿಗೆ ನಾನು ಮನವರಿಕೆ ಮಾಡುತ್ತೀರುವೆನು!" ಎಂಬ ವಾಗ್ವಾದನವನ್ನು ದೇವರೊಂದಿಗೆ ಮೊದಲನೆ ಹಾಗು ಕಡೇಯ ಸಾರಿ ಸೌಲನು ಮಾಡಿದನು. "ಸ್ತೆಫನನಂತೆ, ಮರಣಹೊಂದಲು ಸಿದ್ಧನಿರುವೆನೆಂದು ಸಹ ಪ್ರತಿಕ್ರಿಯಿಸಿದನು!"[35] ಅದಕ್ಕೆ ಪ್ರತ್ಯೇಕವಾಗಿ ಕರ್ತನು ಉತ್ತರಿಸಿ "ನೀನು ಸಾಯುವದಕ್ಕೆ ನಾನು ಅನುಮೋದಿಸಲಾರೆ! - ಅನ್ಯರಿಗೆ ಸುವಾರ್ತೆ ಸಾರುವದೇ ನಿನ್ನ ಅಂತಿಮವಾದ ಉದ್ದೇಶವಾಗಿದೆ - ಅದು ಮುಂದೆ ಬರಲಿದೆ. ಇಲ್ಲಿ ನಿನಗೆ ಹೆಚ್ಚಿನ ಕೆಲಸವಿಲ್ಲ. ಆ ಪಟ್ಟಣವನ್ನು ತೊರೆದು, ಆ ಕಾರ್ಯವನ್ನು ಬೇಗನೆ ಮಾಡು!" ಸೌಲನು ವಾದವನ್ನು ನಿಲ್ಲಿಸಿ, ವಿಧೇಯನಾದನು. *ತನ್ನನ್ನು ಒಪ್ಪಿಸಿಕೊಡುವ ಮೂಲಕ ತನ್ನ ಕಠಿಣತೆಯ ಅಡ್ಡಿಯನ್ನು ಜಯಿಸಿದನು.*

ಒಬ್ಬ ಕ್ರೈಸ್ತನಿಗೆ ನಾನು ನೀಡಲಿರುವ ಉತ್ತಮವಾದ ಸಲಹೆ ಏನೆಂದರೆ: ಕರ್ತನ ಮೇಲೆ *ಭರವಸವಿಟ್ಟು*, ಆತನ ವಿವೇಕವನ್ನು ಅವಲಂಭಿಸಿ ದೇವರು! ತನ್ನ ವಾಕ್ಯದಿಂದ ಯೋಗ್ಯವಾದದ್ದನ್ನೇ ತಿಳಿಸುವನು - ಅದು ನಿನ್ನ ತಿಳುವಳಿಕೆಯನ್ನು ಅವಲಂಭಿಸಿರುವದಿಲ್ಲ. ಪ್ರಶ್ನಿಸದೆ ವಿಧೇಯರಾಗಿರಿ - ನಂತರ ಆತನ ಆಶೀರ್ವಾದದ ಭರವಸೆಯಲ್ಲಿ ನೆಲೆಸಿರಿ!

## ಹತಾಶೆ ಎಂಬ ಅಡ್ಡಿ (9:30)

ಸೌಲನು ಹತಾಶೆಗೊಂಡವನಾಗಿ ತಾರ್ಸಕ್ಕೆ ಬಂದನು. ಅವನು ಯೆರೂಸಲೇಮಿನಲ್ಲಿದ್ದ ತನ್ನ ಹಳೆಯ ಸ್ನೇಹಿತರಿಗೆ ಸುವಾರ್ತೆ ಸಾರಬೇಕೆಂದು ಬಯಸಿದನು, ಆದರೆ ಕರ್ತನು ಅವನಿಗೆ "ಪಟ್ಟಣದಿಂದ ಹೊರಗೆ ಹೋಗು" ಅಂದನು. ಸಭೆಯಲ್ಲಿ ಕಷ್ಟಪಟ್ಟು ದುಡಿಯುವವರ ಅಗತ್ಯತೆ ಇದ್ದರೂ ಸಹ, ಅಪೊಸ್ತಲರು ಅವನನ್ನು ಅವನ ಮನೆಗೆ ಕಳುಹಿಸಿದರು! ನಮ್ಮಲ್ಲಿರುವ ದರ್ಶನಗಳು ಹಾಗು ಕನಸುಗಳು ನೆರವೇರದೆ ಇರುವಾಗ, ನಾವು ಹತಾಶೆಗೊಳ್ಳುತ್ತೇವೆ. ಹತಾಶೆಗೊಂಡು ಸೇವೆಯನ್ನು ನಿರಾಕರಿಸಿದವರ ಪರಿಚಯ ನನಗುಂಟು ಆದರೆ ಸೌಲನು ಅದನ್ನು ಮಾಡಲಿಲ್ಲ. *ಅವನು ನಂಬಿಗಸ್ತನಾಗಿ ತನ್ನ ಹತಾಶೆಯೆಂಬ ಅಡೆತಡೆಯನ್ನು ಜಯಿಸಿದನು.*

ಹಾಗೂ, ಪೌಲನು ತನ್ನ ಕುಶಲತೆಯಿಂದ ತಾರ್ಸದಲ್ಲಿಯೂ ಸಭೆಯನ್ನು ಪ್ರಾರಂಭಿಸಿದನು. ಅಲ್ಲಿ ಅವನು ಏಳು ವರ್ಷಗಳ ಕಾಲ ತಂಗಿದ್ದನು. ಅಲ್ಲಿ ದೇವರು ಅವನನ್ನು ಸೇವೆಗಾಗಿ ಸಿದ್ಧಪಡಿಸಿದನು. ತಾರ್ಸದಲ್ಲಿ ಸ್ನೇಹಿತರಿಗೂ ಮತ್ತು ಅವನ ಕುಟುಂಬದವರಿಗೂ ವಾಕ್ಯ ಸಾರುವ ಮೊದಲ ಅವಕಾಶವನ್ನು ಅವನು ಹೊಂದಿದನು.[36] ಅವರೆಲ್ಲರನ್ನು ಅವನು ಪರಿವರ್ತನೆಗೊಳಿಸಿದ್ದರೂ[37] ಅವನ ಸಮೀಪಸ್ಥರೊಂದಿಕ್ಕೆ ಸುವಾರ್ತೆಯನ್ನು ಹೇಳುವದು

ಪ್ರಾಮುಖವಾಗಿತ್ತು.

ನಂತರ ಪೌಲನು ತರಬೇತಿಪಡೆದವನಾಗಿ, ತಾರ್ಸನಲ್ಲಿ ಸಭೆಯನ್ನು ಆರಂಭಿಸಿದನು. ಅವನು ಯೆರೂಸಲೇಮನ್ನು ಬಿಟ್ಟನಂತರ "ಸಿರಿಯ ಮತ್ತು ಕಿಲಿಕ್ಯ ಪ್ರಾಂತ್ಯಗಳಿಗೆ ಹೋದನು" (ಗಲಾತ್ಯ 1:21).[38] ನಂತರ ಪೌಲ ಸಿಲ್ವಾನರು ತಮ್ಮ ಎರಡನೆಯ ಸೇವಾ ಪ್ರಾಯಾಣವನ್ನು ಆರಂಭಿಸಿದರು, "ಅವರು ಹೊರಟು ಸಿರಿಯ ಕಿಲಿಕ್ಯ ಸೀಮೆಗಳಲ್ಲಿ ಸಂಚರಿಸುತ್ತಾ ಸಭೆಗಳನ್ನು ದೃಢಪಡಿಸಿದರು" (15:41). ಅವನ ಮೊದಲ ಸೇವಾ ಪ್ರಾಯಾಣದಲ್ಲಿ ಆಯಾ ಸಭೆಗಳನ್ನು ಸ್ಥಾಪಿಸಿದನು ಎಂಬುದಾಗಿರದೆ, ಬಹುಶಃ ಪೌಲನು ತಾರ್ಸದಲ್ಲಿ ತಂಗಿರುವಾಗ ಆ ಸಭೆಗಳನ್ನು ಸ್ಥಾಪಿಸಿರಬಹುದು.

ಮುಂದೆ, ತಾರ್ಸದಲ್ಲಿ ಸೌಲನು ತಾಳ್ಮೆಯನ್ನು ಕಲಿತುಕೊಂಡನು ದಮಸ್ಕದ ದಾರಿಯಲ್ಲಿ, ಕರ್ತನು ಅವನಿಗೆ, ಅನ್ಯರಿಗೆ ಸುವಾರ್ತೆ ಸಾರಲು ನಿನ್ನನ್ನು ಕಳುಹಿಸುವೆನು ಎಂದು ಹೇಳಿದ್ದನು (26:15-18; ಹೋಲಿಸು 9:15; 22:15). ಯೆರೂಸಲೇಮಿನಲ್ಲಿ ಮೂರು ವರ್ಷಗಳನ್ನು ಕಳೆದ ನಂತರ, ಕರ್ತನು ಅವನಿಗೆ ತನ್ನ ಸವಾಲನ್ನು ಪುನರಾವರ್ತಿಸಿದನು (22:21). ಹೇಗೋ ಏಳು ವರ್ಷಗಳ ನಂತರವೇ ಅನ್ಯರಿಗೆ ಸುವಾರ್ತೆ ಸಾರಲು ಆರಂಭಿಸಿದನು![39] ಸೌಲನು "ಕರ್ತನಲ್ಲಿ ಕಾದುಕೊಳ್ಳುವದನ್ನು ಅರಿತ್ತಿದ್ದನು" (ಕೀರ್ತನೆ 37:9).[40]

ಅಂತಿಮವಾಗಿ, ತಾರ್ಸದಲ್ಲಿ ಸೌಲನು ಹಿಂಸೆಯನ್ನು ಅನುಭವಿಸುವಲ್ಲಿ ದೀರ್ಘಶಾಂತಿವುಳ್ಳವನಾಗಿದ್ದನು. ನಂತರ ಅವನು ಬರೆದು ಅವನು ಸೆರೆಮನೆಗಳಲ್ಲಿ ಹಾಕಲ್ಪಟ್ಟನು, ಯೆಹೂದ್ಯರಿಂದ ಐದುಸಾರಿಚಡಿ ಏಟುಗಳನ್ನು ಹೊಂದಿದನು, ರೋಮಾಯರಿಂದ ಮೂರುಸಾರಿಚಡಿ ಏಟುಗಳನ್ನು ಹೊಂದಿದನು, ಮೂರು ಸಾರಿ ಹಡಗು ಮುರಿದು ಹೋಯಿತು.[41] ಈ ಕಷ್ಟಗಳ ಕುರಿತು ಅವನು ಬರೆಯುವಾಗ, ರೋಮಾಯರ ಚಡಿ ಏಟಿನ ಬಗ್ಗೆ ಮಾತ್ರ ಲೂಕನು ದಾಖಲಿಸಿರುವನು (16:22, 23). ಒಂದು ಸಾರಿ ಮಾತ್ರ ಸೆರೆಮನೆಯಲ್ಲಿದ್ದನು (16:23), ಯೆಹೂದ್ಯರಿಂದ ಏಟು ತಿಂದಿರಲಿಲ್ಲ ಹಡಗಿನ ಅಪಘಾತವಾಗಿರಲಿಲ್ಲ.[42] ಸೌಲನ ಸಿರಿಯಾ ಮತ್ತು ಕಿಲಿಕ್ಯದ ಏಳು ವರ್ಷಗಳ ಸೇವಾ ಅವಧಿಯಲ್ಲಿ ನಡೆದಂತ ಘಟನೆಗಳನ್ನು ದಾಖಲು ಮಾಡಿರುವದಿಲ್ಲ.[43] ಅವನು ಶಿಲುಬೆಯ ಅನುಭವವನ್ನು ಹೊಂದಿದವನಾಗಿ, ಅಧ್ಯಾಯ 11ರಲ್ಲಿ ಕಾಣಿಸಿಕೊಂಡನು, ದೇವರ ಕಾರ್ಯವನ್ನು ಮಾಡಲು, ಹಾಗೂ ಸೈತಾನನು ತಂದೊಡ್ಡವಂತಹ ಅಡೆತಡೆಗಳನ್ನು ಎದುರಿಸಲು ಸಿದ್ಧವಾದವನಾಗಿದ್ದನು!

ಸೌಲನು ಯೆರೂಸಲೇಮಿನಲ್ಲಿಯೇ ತಂಗಿರಲು ಬಯಸಿದರೂ, ದೇವರು ಅವನನ್ನು ತಾರ್ಸಕ್ಕೆ ಕಳಿಹಿಸಿದನು - *ಇದು ಕರ್ತನ ಸರಿಯಾದ ನಿರ್ದಾರವಾಗಿತ್ತು.* ಕ್ರಿಸ್ತನಲ್ಲಿರುವ ಕೂಸುಗಳು, ಹತಾಶೆಗೊಂಡರೂ, ಪರಲೋಕದ ತಂದೆಯ ಮೇಲೆ ಸರಳವಾದ ನಂಬಿಕೆಯನ್ನಿಡಬೇಕು. ಆತನಿಗೆ ಸಮೀಪಸ್ತರಾಗಿರಿ. ಪ್ರಾರ್ಥನೆಯ ಮೂಲಕ ಆತನೊಂದಿಗೆ ಮಾತನಾಡಿರಿ. ತನ್ನ ವಾಕ್ಯದ ಮೂಲಕ ಆತನು ನಿಮ್ಮೊಂದಿಗೆ ಮಾತನಾಡಲಿ, ಪ್ರತಿಯೊಂದು ಯೋಚನೆಯಲ್ಲೂ ಆತನೊಂದಿಗೆ ನಡೆಯಿರಿ.

ನನ್ನ ಚಿಕ್ಕಮಗಳಾದ ಅಂಜೆಲೂ, ಮೃಧು ಸ್ವಭಾವದವಳು ಆಕೆ ಮಗುವಾಗಿರುವಾಗ, ರಾತ್ರಿ ಸಮಯದಲ್ಲಿ ನನ್ನ ಹಾಸಿಗೆಯ ಬಳಿಗೆ ಬಂದು, ಆ ದಿನದಲ್ಲಿ ಆದ ಸಂಗತಿಗಳನ್ನು ನನಗೆ ತಿಳಿಸುತ್ತಿದ್ದಳು - ಈ ವಿಷಯವನ್ನು ಹೇಳಿ ತನ್ನ ಭಾರವನ್ನು ಕಡಿಮೆ ಮಾಡಿಕೊಳ್ಳುತ್ತಿದ್ದಳು. ಒಂದು ಸಂದರ್ಭದಲ್ಲಿ ರಾತ್ರಿ ವೇಳೆಯಲ್ಲಿ ಎದ್ದು ಆಕೆ ಮಾಡಿದ ತಪ್ಪುಗಳನ್ನು ಅರಿಕೆ ಮಾಡುತ್ತಿದ್ದಳು, ಆ ತಪ್ಪಿನಿಂದ ಅವಳು ನಿದ್ರಿಸಲು ಅಸಾಧ್ಯವಾಗಿತ್ತು. ನಾನು ಮತ್ತು ನನ್ನ ಹೆಂಡತಿ ಅವಳಿಗೆ "ಆಂಜೆ ನೀನು ಯಾವಾಗಲೂ ಒಳ್ಳೇಯ ಕಾರ್ಯವನ್ನು ಮಾಡದೆ ಇರಬಹುದು; ಆಕೆ ಅದನ್ನು ಮಾಡದೆ ಇರುವಾಗ, ಅದನ್ನು ಬೇಗನೆ ಅಥವಾ ತಡವಾಗಿಯಾದರೂ ನಮಗೆ ತಿಳಿಸುತ್ತಿದ್ದಳು." ಆಕೆ ನಮ್ಮನ್ನು ಪ್ರೀತಿಸಿ, ನಮ್ಮಲ್ಲಿ ಭರವಸ ಇಟ್ಟಿದ್ದರಿಂದ ತರೆದ ಹೃದಯದಿಂದ ಎಲ್ಲವನ್ನು ಹೇಳುತ್ತಿದ್ದಳು. ಅದೇ ರೀತಿಯಲ್ಲಿ ನಿಮ್ಮ ದೇವರಲ್ಲಿ ಭರವಸವನ್ನು ಪ್ರೀತಿಯನ್ನು ಇಡಿರಿ. ಆತನ

ಛಲದಲ್ಲೂ ಮತ್ತು ಪೋಷಣೆಯಲ್ಲೂ ವಿಶ್ರಾಂತಿಯನ್ನು ಪಡೆಯಿರಿ ಸೌಲನು ತಾರ್ಸದಲ್ಲಿ ಏಕಾಂಗಿಯಾಗಿದ್ದರೂ, ನಂಬಿಗಸ್ತನಾಗಿದ್ದಂತೆ, ಇಬ್ರಿ.

## ಮುಕ್ತಾಯ

ಸೌಲನಿಗೆ ಕ್ರೈಸ್ತ ಜೀವಿತವು ಸರಳವಾಗಿರಲಿಲ್ಲ, ಆದರೆ ಅದು ಅಸಾಧ್ಯವೂ ಆಗಿರಲಿಲ್ಲ. ಆದರೆ ಕರ್ತನ ಸಹಾಯದಿಂದ, ಯಾವುದೇ ಅಡೆತಡೆಗಳನ್ನು ಜಯಿಸಲು ಶಕ್ತನಾಗಿದ್ದನು (ಫಿಲಿಪ್ಪಿ 4:13)! ಅದರಂತೆ ನಾವು ಮಾಡಬಹುದು. ನಾವು ನಮ್ಮ ಜೀವಿತದ ಓಟವನ್ನು ಅಂತ್ಯಗೊಳಿಸುವಾಗಿ, ಕರ್ತನು ಜೀವದ ಜಯಮಾಲೆಯನ್ನು ಹಿಡಿದು ಕಾಯುತ್ತಿರುವನು. ನಂತರ ಅಪೊಸ್ತಲನು ತಿಳಿಸಿದಂತೆ, "ನೀತಿವಂತರಿಗೆ ದೊರಕುವ ಜಯಮಾಲೆಯು ಮುಂದೆ ನನಗೆ ಸಿದ್ಧವಾಗಿದೆ; ಅದನ್ನು ನೀತಿಯಾಗಿ ನ್ಯಾಯಾಧಿಪತಿಯಾಗಿರುವ ಕರ್ತನು ಆ ದಿನದಲ್ಲಿ ನನಗೆ ಕೊಡುವನು; ನನಗೆ ಮಾತ್ರವಲ್ಲದೆ ತನ್ನ ಪ್ರತ್ಯಕ್ಷತೆಯನ್ನು ಪ್ರೀತಿಸುವವರೆಲ್ಲರಿಗೂ ಕೊಡುವನು" (2 ತಿಮೊಥೆ 4:8).

ಅಧ್ಯಾಯ 9ರಲ್ಲಿ ಲೂಕನು ಒಂದು ಪ್ರಗತಿಪರವಾದ ಸುದ್ಧಿಯನ್ನು ಪುಸ್ತಕದಲ್ಲಿ ದಾಖಲುಮಾಡಿರುವನು: ಹೀಗಿರಲಾಗಿ[44] ಯೂದಾಯಾ ಗಲಿಲಾಯ[45] ಸಮಾರ್ಯ ಸೀಮೆಗಳಲ್ಲಿದ್ದ ಸಭೆಯು ಸಮಾಧಾನ ಹೊಂದಿತ್ತು[46] ಮತ್ತು ಭಕ್ತಿಯಲ್ಲಿ ಬೆಳೆದು[47] ಕರ್ತನ ಭಯದಲ್ಲಿ[48] ನಡೆದು ಪವಿತ್ರಾತ್ಮನಿಂದ ಪ್ರೋತ್ಸಾಹವನ್ನು ಹೊಂದಿ ಹೆಚ್ಚುತ್ತಾ ಬಂತು[49] NIV (9:31). ಲೂಕನ ಪದದಲ್ಲಿ ಸಾಮಾನ್ಯ ಸಭೆ ಎಂಬುದಾಗಿ ಇದ್ದರೂ, ಸಭೆಯು ಜನರನ್ನು ಹೊಂದಿರುತ್ತದೆ - ಅದರಲ್ಲಿ ನೀವೂ ಸಹ ಒಳಗೊಂಡಿರುವಿರಿ. ಪೌಲನ ಸೇವೆಯ ಪ್ರಥಮ ದಿವಸಗಳಲ್ಲಿ ಉಂಟಾದ ವಿಷಯಗಳನ್ನು ನೀವೂ ಸಹ ಕಲಿಯ ಬೇಕು ಎಂದು ಸಲಹೆಯನ್ನು ನೀಡದೆ[50] ಅದರಲ್ಲಿ ನೀವು ವ್ಯಯಕ್ತಿಕವಾದ ಸಮಾದಾನವದ ಆನಂದವನ್ನು ಆತ್ಮೀಕ ಜೀವಿತದ ಅಭಿವೃದ್ಧಿಗೆ ಹೊಂದುವಿರಿ ಎಂದು ತಿಳಿಸಲಾಗಿದೆ! "ನಾವು ದೇವರ ಭಯದಲ್ಲೂ, ಪವಿತ್ರಾತ್ಮನ ಸಂತೈಸುವಿಕೆಯಲ್ಲೂ," ದೇವರ ಮಗುವಾಗಿ ಮುಂದುವರಿಯಲು ಆಸ್ಪದವಾಗುತ್ತದೆ, ಎಂಬುದು ನನ್ನ ಎಡೆಬಿಡದೆ ಪ್ರಾರ್ಥನೆಯಾಗಿದೆ!

---

ಟಿಪ್ಪಣೆಗಳು

[1]ಹಿಂದಿನ ಪುಸ್ತಕದಲ್ಲಿರುವ 8:22, 24ರ ಟಿಪ್ಪಣೆಯನ್ನು ನೋಡಿರಿ. [2]1 ಕೊರಿಂಥ 3:1, 2; ಇಬ್ರಿಯ 5:12-14. ಪರಿಪಕ್ವತೆ ಹೊಂದದ ಕ್ರೈಸ್ತನು, ಹಿಂಜರಿಯವನು. [3]ಸ್ತೆಫನನಿಗೂ, ಯೇಸುವಿಗೂ ಅವರು ಇದೇ ಕಾಯರ್ವನ್ನು ಮಾಡಿದ್ದರು. [4]ರಕ್ಷಿಸಲ್ಪಟ್ಟವರು ಸಭೆಗೆ ಸೇರಿಸಲ್ಪಡುವರು, "A Man Without a Congregation," Sermon preached at the Southern Hills church of Christ, Abilene, Texas, on 22 September 1985. [5]ಇದು ಪೌಲನಲ್ಲಿದ್ದ ಸಹಜವಾದ ಸಂಗತಿ (14:4-6; 23:12-22). ಸಾಮಾನ್ಯವಾಗಿ ಜನರು ಪೌಲನನ್ನು ದ್ವೇಷಿಸಿದರು ಅಥವಾ ಪ್ರೀತಿಸಿದರು, ಕ್ರೈಸ್ತರಲ್ಲಿದವರೂ ಸಹ. ಅ ಕ್ರೈಸ್ತರು ಸಹ ಅವನ ಸುರಕ್ಷತೆಯ ಬಗ್ಗೆ ಚಿಂತಿಸುತ್ತಿದ್ದರು (19:31). ಇವೆಲ್ಲದರಲ್ಲೂ ದೇವರು ಸೌಲನಿಗೆ ಸುರೆಕ್ಷೆಯನ್ನು ನೀಡಿದ್ದನು. [6]ದಿ ಎಥನಾರ್ಬ್ ಎಂಬುವವನು "ಅರೇತೇಸ್" ಎಂಬ ದಮಸ್ಕದ ಅರಸನು. ಅವನಿಗೆ ಎಷ್ಟು ಅಧಿಕಾರವಿತ್ತು ಎಂಬುದನ್ನು ಅರಿಯೆವು. ಮತ್ತು ಎಲ್ಲಿ ಅವನು, "ಅಡಳಿತಾಧಿಕಾರಿಯಾಗಿದ್ದನು" ಎಂಬುದನ್ನು ನಾವು ಅರಿಯೆವು. [7]ಆರೇಥಸ್ ನಬ ಥೇಯನ್ ಹಾಗು ಅರಬಸ್ಥಾನವನ್ನು ಆಳುತ್ತಿದ್ದನು - ಈ ಅರಬಸ್ಥಾನದಲ್ಲಿ ಸೌಲನು ಕೆಲವು ಕಾಲ ಇದ್ದನು. [8]ಅರೇಥೇಸನು ದಮಸ್ಕವನ್ನು ತಾತ್ಕಲಿಕವಾಗಿ ಅಡಳಿತ ಮಾಡಿರಬಹುದು (ದಮಸ್ಕದ ಹಣದ ಮೇಲೆ ಈ ಅವಧಿಯ ರೋಮನ್ನರ ಮುದ್ರಯು ಇರುವದಿಲ್ಲ). ಬಹುಶಃ ಅರಬದ ಸೈನಿಕರು ಉರಿನಿಂದ ಹೊರಗಡೆ ಇರಬಹುದು, ಊರ ಬಾಗಿಲನ್ನು ಕಾಯುತ್ತಿರಬಹುದು (ದಮಸ್ಕವು ಅರೇಬಿಯನ್ ಸಮುದ್ರಿ ತೀರದಲ್ಲಿತ್ತು). ಪಟ್ಟಣದಲ್ಲಿದ್ದ ಅರಬರ ಸಂಜ್ಞೆಗನುಗುಣವಾಗಿ ಎಥನಾರ್ಕನ ಅಡಳತವು ನೇಮಿತವಾಗಿರಬಹುದು (ಅದು ಚಿಂತನೆಯಾಗಿತ್ತು). [9]ಅನೇಕ ಕಾರಣಗಳ ನಿಮಿತ್ತ ಈ ಎರಡು ಗುಂಪುಗಳ ನಡುವೆ

ದ್ವೇಷವಿತ್ತು. ಕೆಲವು ವರ್ಷಗಳ ನಂತರ, ದಮಸ್ಕದಲ್ಲಿದ್ದ ಅರಬ್ಬರು 10,000ಸಾವಿರ ಯೆಹೂದ್ಯರನ್ನು ಕೊಂದು ಹಾಕಿದರು (ಕ್ರಿ.ಶ. 66). [10]ಬಹಳಷ್ಟು ಯೆಹೂದ್ಯರು ದಮಸ್ಕದಲ್ಲಿದ್ದರು.

[11]ಪ್ರಸಂಗದ ಮೂಲಕ ಪೌಲನು ದಮಸ್ಕದಲ್ಲಿ ಗೊಂಲವವನ್ನು ಸೃಷ್ಟಿಸಿದ್ದನು; ಅರಬಸ್ಥಾನದಲೂ ಗೊಂದಲವಾಗಿರಬಹುದು. [12]"ಅವನ ಶಿಷ್ಯರು" ಎಂಬುದು ಅಸಹಜವಾಗಿದೆ, ಏನೇ ಕಾರಣವಿದ್ದರೂ, ದಮಸ್ಕದವರನ್ನು ಪರಿವರ್ತಿಸುವಲ್ಲಿ ಸೌಲನು ಸಫಲನಾಗಿದ್ದನು. ಆದರೆ, ಸೌಲನು ತನ್ನನ್ನೇ ಅನುಸರಿಸಬೇಕೆಂದ ಬಯಸಲಿಲ್ಲ. ಅವನು ಅವರನ್ನು ಯೇಸುವಿನ ಬಳಿಗೆ ನಡಿಸಿದನು (1 ಕೊರಿಂಥ 1:12, 13). [13]"ಬುಟ್ಟಿ" ಎಂಬ ಎರಡು ಗ್ರೀಕ್ ಪದಗಳನ್ನು ಬಳಸಲಾಗಿದೆ. ಅಪೊಸ್ತಲರ ಕೃತ್ಯಗಳು 9ರಲ್ಲಿ ವಸ್ತುಗಳನ್ನು ಸಂಗ್ರಹಿಸಿಡುವ ಬುಟ್ಟಿ ಎಂಬುದಾಗಿದೆ (ಮತ್ತಾಯ 15:37; ಮಾರ್ಕ 8:8). 2 ಕೊರಿಂಥ 11ರಲ್ಲಿ ಹಗ್ಗದಿಂದ ಮಾಡಿದ ಬುಟ್ಟಿ. [14]ಅವನ ಬಲಹೀನತೆಯ ಕುರಿತ ದೃಷ್ಟಾಂತ (2 ಕೋರಿಂಥ 11:30-33). [15]ಅನೇಕ ಸಭೆಗಳಲ್ಲಿ ಇದೇ ವಿಧವಾದ ಘಟನೆಗಳು ನಡೆದಿವೆ. ಸ್ಥಳೀಯ ಉದಾಹರಣೆಯನ್ನು ಹೇಳಬಹುದು. [16]ಗಲಾತ್ಯ 1:18ರಲ್ಲಿ ಒಂದು ಭಾಗವನ್ನು ಪೂರ್ತಿ ಎಂಬುದಾಗಿ ಯೆಹೂದ್ಯರು ತಿಳಿದಿದ್ದರು. ಮೂರು ವರ್ಷಗಳು ಅಂದರೆ, ಸೌಲನು ದಮಸ್ಕದಲ್ಲಿ ಕಳೆದ ಉಳಿದ ಸಮಯ ಎಂಬ ಯೆಹೂದ್ಯ ಲೆಕ್ಕಾಚಾರ ಅವನು ದಮಸ್ಕದಿಂದ ತಪ್ಪಿಸಿಕೊಂಡ ವರ್ಷಗಳು. [17]ಶಿಷ್ಯರು, ಯೆರೂಸಲೇಮಿನಿಂದ ಮೂರು ವರ್ಷಗಳ ಕಾಲ ದೂರವಿದ್ದರು (8:1), ಈ ಶಿಷ್ಯರು ಯಾರು? ಕೆಲವರು ಆ ಸ್ಥಳವನ್ನು ಬಿಡದೆ ಇರಬಹುದು (ಈ ಪುಸ್ತಕದ ಹಿಂದಿನ ಪಾಠದಲ್ಲಿರುವ 8:1ರ ಟಿಪ್ಪಣಿಯನ್ನು ನೋಡಿರಿ) ಮತ್ತು ಕೆಲವರು ಹಿಂದಿರುಗಿರಬಹುದು. (ಕೆಲವರು ಇತ್ತೀಚೆಗೆ ಪರಿವರ್ತನೆಗೊಂಡವರಿರ ಬಹುದು, "ಭಯ" ಅಂದರೆ ಈ ಹಿಂದೆ ಪೌಲನಿಂದ ಹಿಂಸೆಗೊಳಗಾದವರು) "ಎಲ್ಲಾ" ಶಿಷ್ಯರು ಸೌಲನನ್ನು ನಂಬದೆ ಇರಲಾಗಿ, ಅಂದರೆ ಅಪೊಸ್ತಲರು ಒಳಗೊಂಡಿರಬಹುದು. [18]ಪೌಲನು ಪರಿವರ್ತನೆಗೊಂಡು ಮೂರು ವರ್ಷಗಳಾದರು, ಯೆರೂಸಲೇಮಿನವರು ಏಕೆ ಈ ವಿಷಯವನ್ನು ತಿಳಿಯಲಿಲ್ಲ ಎಂಬುದು ಕೆಲವರ ಹೇಳಿಕೆ. ಅದಕ್ಕೆ ಅನೇಕ ಕಾರಣಗಳಿರಬಹುದು: (1) ಮಾತಿನ ಸಂಪರ್ಕದ ಕೊರತೆ. (2) ಅನೇಕ ಅಡಚಣೆ ನಡೆಸುತ್ತಿದ್ದನು (ಹಿಂದಿನ ಟಿಪ್ಪಣಿಯನ್ನ ನೋಡುವದು) ದಮಸ್ಕದವರಿಗೂ ಮತ್ತು ಯೆರೂಸಲೇಮಿನವರಿಗೂ ಇದ್ದ ಸಂಬಂಧದ ಕೊರತೆ. (3) ಅವನು ಅರಬಸ್ಥಾನಕ್ಕೆ "ಹೊದ್ದದ್ದರಿಂದ" ಸಂದೇಹದ ನಿಮಿತ್ತ, ಅವನು ಯೆರೂಸಲೇಮಿನ ಶಿಷ್ಯರನ್ನು ಘೋರ ವಾಗಿ ಹಿಂಸಿಸಿದ್ದರಿಂದ, ಅವನ ಮಾತನ್ನು ಅವರು ನಂಬುವನು ಕಷ್ಟವಾಯಿತು. [19]Burton Coffman, *Commentary on Acts* (Austin, Tex.: Firm Foundation Publishing House, 1976), 190. [20]ಯೆರೂಸಲೇಮಿನ ನಾಯಕತ್ವದಲ್ಲಿ, ಅಪೊಸ್ತಲರ ನಾಯಕತ್ವದ ಕುರಿತು ಅಪೊಸ್ತಲರ ಕೃತ್ಯದಲ್ಲಿ ಕಡೇಯ ಸಾರಿ ತಿಳಿಸಲಾಗಿದೆ. ಗಲಾತ್ಯ 1:18-20ಲ್ಲಿ ಪೌಲನು ತಿಳಿಸಿರುವಂತೆ, ಹನ್ನೆರಡು ಜನರಲ್ಲಿ ಪೇತ್ರನ ನಾಯಕತ್ವವನ್ನು ಮಾತ್ರ ದಾಖಲಿಸಲಾಗಿದೆ. (ಉಳಿದವರು ಪ್ರಸಂಗದ ಪ್ರಯಾಣದಲ್ಲಿರಬುಹುದು) ನಂತರ ಕರ್ತನ ಸಹೋದರನಾದ ಯಾಕೋಬನ ನಾಯಕತ್ವವನ್ನು ನೋಡುತ್ತೇವೆ ಗಲಾತ್ಯ 1:19. ಸೌಲನನ್ನು ಅಪೊಸ್ತಲರ ಬಳಿಗೆ ತಂದರು ಎಂಬುದನ್ನು ಲೂಕನು ವ್ಯಾಖ್ಯಾನವನ್ನು ಮಾಡಲು ಹೇಗೆ ಸಾಧ್ಯ? ಒಂದು ವೇಳೆ ಲೂಕನು, "ಪೇತ್ರನು" ಅಪೊಸ್ತಲರ ಪ್ರತಿನಿಧಿ ಎಂದು ತಿಳಿದಿರಬಹುದು, ಅಥವಾ (14:4ಸ, 14ರಲ್ಲಿ ಅವನು ಮಾಡಿರುವಂತೆ) ಯಾಕೋಬನನ್ನು ಲೆಕ್ಕಕ್ಕೆ ಸೇರಿಸಿರಬಹುದು. "ಅಪೊಸ್ತಲ" ಅಂದರೆ "ಕಳುಹಿಸಲ್ಪಟ್ಟವನು" ಎಂದು ನೆನಪಿಸಿಕೊಳ್ಳಿರಿ. ಅದನ್ನು ಸಾಮಾನ್ಯವಾಗಿ ಬಳಲಿರಬಹುದು (ಸಭೆಯಿಂದ ನೇಮಿಸಲ್ಪಟ್ಟವನು) ಒಂದು ವೇಳೆ ವಿಶೇಷವಾಗಿ "ಪೌಲ ಮತ್ತು ಹನ್ನೆರಡು ಜನ" ಎಂಬುದಾಗಿರಬಹುದು.

[21]ಸೌಲನು ಯೇಸುವಿನ ಶಬ್ಧವನ್ನು ಕೇಳುವದು ಮಾತ್ರವಲ್ಲದೆ; ಅವನು ಆತನನ್ನು ನೋಡಿದ್ದನು. [22]ಸೌಲನ ಪ್ರಥಮ ಪ್ರಯಾಣವನ್ನು ನೋಡಿರಿ. [23]ಸಭೆಯು ಬಾರ್ನಬನನ್ನು ಅಂತಿಯೊಕ್ಯಕ್ಕೆ ಕಳುಹಿಸಿರಬಹುದು (11:22) ಅಥವಾ ದಮಸ್ಕಕ್ಕೆ ವ್ಯಕ್ತಿಗತವಾದ ಪ್ರಯಾಣಮಾಡಿರಬಹುದು. ತಾರ್ಸವು ಪ್ರಮುಖವಾದ ಪಟ್ಟಣವಾಗಿತ್ತು, ಬಾರ್ನಬನು ಕುಪ್ರದಿಂದ ತಾರ್ಸಕ್ಕೆ ಅನೇಕ ಪ್ರಯಾಣ ಮಾಡಿರಬಹುದು. [24]ಬಾರ್ನಬನು ಅದ್ಭುತ ಶಕ್ತಿಯಿಂದ ಸೌಲನನ್ನು ಅರಿತ್ತಿದ್ದನು ಎಂಬ ಹೇಳಿಕೆಯಿದೆ (13:1ರ ಪ್ರಕಾರ, ಅವನು ಪ್ರೇರಿತನಾದ ಪ್ರವಾದಿಯಾಗಿದ್ದನು ಮತ್ತು ಅಥವಾ ಪ್ರೇರಿತನಾದ ಬೋಧಕನಾಗಿದ್ದನು) ಹಾಗಿದ್ದರೆ ಅಪೊಸ್ತಲರು ಮಾಹಿತಿಯನ್ನು ಪಡೆಯಲು ತಮ್ಮ ಸಾಮರ್ಥ್ಯವನ್ನು ಏಕೆ ಬಳಸಿದರು? [25]ಅವನು ಇಬ್ರಿಯ ಪತ್ರಿಕೆಯನ್ನು ಬರೆದಿರುವುದಾದರೆ, ನಾವು ಪೌಲನ 14 ಪುಸ್ತಕಗಳನ್ನು ಹೊಂದಿರುವೆವು. [26]ಗಲಾತ್ಯ 1:22, 23ರಲ್ಲಿ ಕ್ರಿಸ್ತನಲ್ಲಿದ್ದ ಯೂದಾಯ ಸಭೆಯ ಕುರಿತಾಗಿ ಅವನು ಅರಿತಿರಲಿಲ್ಲ ಎಂಬ ಹೇಳಿಕೆಯನ್ನು ನೀಡಿರುವನು. "ಯೂದಾಯದ ಸಭೆಗಳು" ಯೆರೂಸಲೇಮಿನ ಸಭಿಕರನ್ನು ಹೊರತುಪಡಿಸಿದ ಸಭೆ. 15 ದಿವಸಗಳಲ್ಲಿ ಯೆರೂಸಲೇಮಿನಿಂದ ಹೊರ ಸ್ಥಳಗಳಿಗೆ ಸುವಾರ್ತೆ ಸಾರಲು ಸಾಧ್ಯವಾಗಲಿಲ್ಲ. [27]ಅವನು ಗ್ರೀಕ್ ಭಾಷೆಯ ಯೆಹೂದ್ಯರೊಂದಿಗೆ "ತರ್ಕ"

ಮಾಡುತ್ತಿದ್ದನು ಎಂಬ ಸೂಚನೆ. [28]ಸೌಲನ ಮೊದನೆಯಸಾರಿ ಸ್ತೆಫನನನ್ನು ಅಲ್ಲಿ ಸಂಧಿಸಿರಬಹುದು. [29]ಯಲ್ಲಿ "ಚರ್ಚೆ" ಎಂಬುದಾಗಿದೆ ಅದನ್ನು ನಾನು ಒಪ್ಪುವೆನು. [30]ಒಂದು ಕ್ರಾಂತಿಯ ಭಾಗವಾಗಿದ್ದವನು, ಅದನ್ನು ಬಿಟ್ಟು ನಂತರ ಅದನ್ನು ವಿರೋಧಿಸಿದರೆ, ವಿರೋಧಿಗಳಿಗಿಂತಲೂ, ಅವನು ಹೆಚ್ಚು ದ್ವೇಷಕ್ಕೆ ಒಳಗಾಗುವನು. ಗ್ರೀಕ್ ಯೆಹೂದ್ಯರು ಪೌಲನನ್ನು ದ್ವೇಷಿಸಿದ್ದ ಬಗ್ಗೆ ವೈಯಕ್ತಿಕ ಅನುಭವದ ದೃಷ್ಟಾಂತವನ್ನು ಹೇಳಬಹುದು.

[31]"ಸೌಲನ ಪ್ರಥಮ ಪ್ರಯಾಣದ" ನಕ್ಷೆಯನ್ನು ನೋಡಿರಿ 10:1ರ ಟಿಪ್ಪಣಿ. [32]"ಸೌಲನ ಪ್ರಥಮ ಪ್ರಯಾಣದ" ನಕ್ಷೆಯನ್ನು ನೋಡಿರಿ ಮತ್ತು ಈ ಪುಸ್ತಕದ ಹಿಂದಿನ ಪಾಠದಲ್ಲಿರುವ ತಾರ್ಸದ ಕುರಿತ ಟಿಪ್ಪಣಿಯನ್ನು ನೋಡಿರಿ. [33]11:27-30; 12:25ರ ದಾಖಲೆಯನ್ನು ಪೌಲನ ಯೆರೂಸಲೇಮಿನ ಪ್ರಯಾಣಕ್ಕೆ ಹೋಲಿಸುವರು, ಈ ಪ್ರಯಾಣದಲ್ಲಿ ಪೌಲನು ಯೆರೂಸಲೇಮಿನಲ್ಲಿ ಪ್ರಸಂಗಿಸಿರುವ ಯಾವುದೇ ಕುರುಹುಗಳಿಲ್ಲ, ಆ ಸಮಯದಲ್ಲಿ ಅ ಪಟ್ಟಣವನ್ನು ಬಿಟ್ಟ ಕಾರಣಗಳು ಇರುವದಿಲ್ಲ. ಏಕೆಂದರೆ 22:17-21ರ ಕಥೆಯು 9:29, 30ಕ್ಕೆ ಹೋಲಿಸುತ್ತದೆ, ನಾನು ಅದನ್ನು ಇಲ್ಲಿ ಸೇರಿಸಿರುವೆನು. [34]10:10ರ ಟಿಪ್ಪಣಿ ನೋಡಿರಿ. [35]ಅವನ ನೀತಿಯುಳ್ಳ ಕಾರ್ಯಕ್ಕೆ ಮರಣವು ಅಡ್ಡಿಯಾಗಲಿಲ್ಲ (ಹೋಲಿಸು 20:24) ಮರಣದ ಕುರಿತು ಸ್ತೆಫನನು ಮಾಡಿದಂತೆ ಸ್ತೆಫನನು ಸಾಯುವಾಗ ಮಾಡಿದ ವ್ಯಾಖ್ಯಾನ 2 ತಿಮೊಥೆ 4:16ಬಿ. [36]ಅವನ ಪರಿವರ್ತನೆಯ ನಂತರ ಅವನು ಎಂಥಾವಿಧವಾದ ದೃಷ್ಟಾಂತವನ್ನು ನೀಡಿರಬಹುದು, ಸೌಲನು ತನ್ನ ತಂದೆಯನ್ನು ಸಂಧಿಸಿದನು - ಅವನನ್ನು ಪರಿಸಾಯನನ್ನಾಗಿ ಬೆಳಸಿದ ತಂದೆಯನ್ನು! [37]ಅವನು ತನ್ನ ಸಹೋದರಿಯನ್ನು ಪರಿವರ್ತನೆ ಮಾಡಿರಬಹುದು, ಕುಟುಂಬದ ಇತರೆ ಸದಸ್ಯರ ಅವನು ದೂರವಿದ್ದಂತೆ, ಅವಳಿಂದ ದೂರವಾಗಿರಲಿಲ್ಲ (23:16). ರೋಮಾಪುರ 16:7, 11, 21ರಲ್ಲಿ ದೈಹಿಕ ಸಂಬಂಧ ಎಂಬುದಾಗಿದೆ (ಕುಟುಂಬ). [38]"ಸೌಲನ ಪ್ರಥಮ ಪ್ರವಾಸದ" ನಕ್ಷೆಯನ್ನು ನೋಡಿರಿ. ತಾರ್ಸವು ಕಿಲಿಕ್ಯದಲ್ಲಿತ್ತು ಅದರ ಪೂರ್ವಕ್ಕೆ ಸಿರಿಯ ಹೊಂದಿಕೊಂಡಿತ್ತು, ಅವೆರಡು ಒಂದಾದ ಪ್ರಾಂತ್ಯವಾಗಿತ್ತು. [39]ಪೇತ್ರನು ಮೊದಲು ಅನ್ಯರಿಗೂ ಮತ್ತು ತನ್ನ ಮನೆಯವರಿಗೂ ಪ್ರಸಂಗಿಸಿದನು. (ಅಪೊಸ್ತಲರ ಕೃತ್ಯಗಳು 10; ಹೋಲಿಸು 15:7-9) (11:20) (11:25, 26). 15:7-9ರ ವಾಕ್ಯವು ಪೌಲನ ಸಂದೇಶಕ್ಕೆ ಪೇತ್ರನ ಪೀಠಿಕೆಯಾಗಿತ್ತು. ತಾರ್ಸದಲ್ಲಿ ಅವನಿರುವಾಗ ಅದರ ಒಂದು ಭಾಗವನ್ನು ಪ್ರಸಂಗಿಸಿರಬಹುದು. [40]ಇದು ಸೌಲನಿಗೆ ಪ್ರಮುಖ ಪಾಠವಾಗಿತ್ತು. ನಂತರದಲ್ಲಿ ಅವನ ಯೋಜನೆಗಳೆಲ್ಲವೂ ಕರ್ತನದ್ದಾಗಿರಲಿಲ್ಲ, ಕರ್ತನು "ಹೌದು" ಎಂಬುದಾಗಿ ಹೇಳುವವರೆಗೂ ಕಾದಿದ್ದನು.

[41]2 ಕೊರಿಂಥ 11:23-25, ಪೌಲನ ಮೂರನೆಯ ಸೇವಾ ಪ್ರವಾಸದ ಅಂತ್ಯದಲ್ಲಿ, ಮೆಕೆದೊನ್ಯದಿಂದ ಈ ಪತ್ರಿಕೆಯನ್ನು ಬರೆಯಲಾಯಿತು (ನಂತರ ಪಾಠದಲ್ಲಿರುವ 20:1, 2ರ ಟಿಪ್ಪಣಿ ನೋಡಿರಿ. ತಾರ್ಸದ ಸೇವೆಯ ನಂತರದ ಹನ್ನೆರಡು ಅಥವಾ ಹೆಚ್ಚಾದ ವರ್ಷದಲ್ಲಿ ಬರೆದಿರಬಹುದು. [42]2 ಕೊರಿಂಥ ಪತ್ರಿಕೆಯನ್ನು ಬರೆದನಂತರ ಅಪೊಸ್ತಲರ ಕೃತ್ಯಗಳು 27ರ ಹಡಗಿನ ಅಪಘಾತವಾಯಿತು. [43]ಸೌಲನು ದಮಸ್ಕದಲ್ಲಿದ್ದಂತೆ, ಅರಬಸ್ಥಾನ ಮತ್ತು ಯೆರೂಸಲೇಮಿನಲ್ಲಿ ಬಹು ಭಲವುಳ್ಳವನಾಗಿದ್ದನು, ಅವನ ಸೇವಾಪ್ರಯಾಣದಲ್ಲೂ ಹೀಗೆಯೇ ಇದ್ದನು. ಅವನು ಆಗಾಗ್ಗೆ ಧಾರ್ಮಿಕ ನಾಯಕರೊಂದಿಗೆ ಘರ್ಷಣೆಯನ್ನು ಹೊಂದಿದ್ದನು. [44]ಕೆಲವು ಬರವಣಿಗೆಗಳಲ್ಲಿ "ಸಭೆಯನ್ನು" ಬಹುಪದದಲ್ಲಿ ತಿಳಿಸಲಾಗಿದೆ. ಮೂರು ಪ್ರಾಂತ್ಯಗಳಲ್ಲಿ ಅನೇಕ ಸಭೆಗಳಿದ್ದರೂ (ಗಲಾತ್ಯ 1:22). ಪಾಲಿಸ್ತೆನಿನ ಕ್ರೈಸ್ತರೆಲ್ಲರನ್ನು ಲೂಕನು "ಸಭೆ" ಎಂದು ಕರೆದನು. [45]ಗಲಿಲಾಯದಲ್ಲಿನ ಸುವಾರ್ತೆ ಸಾರೋಣದ ಬಗ್ಗೆ ಮಾಹಿತಿ ಇರುವದಿಲ್ಲ. ಬಹುಶಃ ಚದರಿಹೊದ ಶಿಷ್ಯರು ಸುವಾರ್ತೆ ಸಾರಿರಬಹುದು (18:1, 4). [46]"ಸಭೆಯು" ಸಮಾಧಾನದ ಸಂತೋಷದ ಸಮಯವನ್ನು ಹೊಂದಿತ್ತು ಎಂದು ತರ್ಜುಮೆ ಸರಿಯಾಗಿದೆ (ಒತ್ತಿ ಹೇಳಿದ್ದು ನನ್ನದು) ಸೈತಾನನು ಸಭೆಯನ್ನು ಬಹುಕಾಲ ಏಕಾಂಗಿಯಾಗಿರುವದಕ್ಕೆ ಬಿಡುವದಿಲ್ಲ. ಮುಖ್ಯವಾದ ಹಿಂಸಕನು ಪರಿವರ್ತನೆ ಗೊಂಡದ್ದರಿಂದ ಸಭೆ ಸಮಾಧಾನದ ಆನಂದವನ್ನು ಹೊಂದಿತ್ತು ಸೌಲನು ಆಸ್ಥಳವನ್ನು ಬಿಟ್ಟು ಹೋದದ್ದರಿಂದಲೂ ಸಭೆ ಆನಂದವಾಗಿರಬಹುದು (ಗ್ರೀಕ್ ಯೆಹೂದ್ಯರಿಗೆ ಯಾವುದೆ ಪ್ರಶ್ನೆಯನ್ನು ಬಿಡಲಿಲ್ಲ). [47]ವಾಕ್ಯದ ಭಲದಿಂದ ಕ್ರೈಸ್ತರು ಕಟ್ಟಲ್ಪಡುತ್ತಾರೆ (20:32) ಅದು ಸಮಾಧಾನದ ಸಮಯವೇ ಹೊರತು, ಸಂತೃಪ್ತಿಯಾಗಿರಲಿಲ್ಲ. "ಮುಂದಿನ ಅಘಾತನಡೆಯುವುದೊರಳಗಾಗಿ ತಮ್ಮ ಹಾದಿಯನ್ನು ಸಿದ್ಧಪಡಿಸುತ್ತಿದ್ದರು." [48]ಜ್ಞಾನೋಕ್ತಿ 1:7; 9:10; 10:27; 14:27 ನೋಡಿರಿ, ಪ್ರಸಂಗಿ 12:13. [49]ಆತ್ಮನು ಕ್ರೈಸ್ತರಿಗೆ ನೀಡುವ ಅಂತರಾತ್ಮದ ಸಂತೈಸುವಿಕೆ ಮತ್ತು ಉತ್ತೇಜನದ ಸೂಚನೆ. [50]ಹಿಂದಿನ ಹಾಗು ಈಗಿನ ಪಾಠದ ಸಲಹೆಗಳನ್ನು ಪುನರಾವರ್ತನೆ ಮಾಡಿರಿ.